ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1255/2016

ಪ್ರಾಸಾ:10

ದಿನಾಂಕ: 16.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನಾಗರಾಜ |
| ತಂದೆಯ ಹೆಸರು | : | ಮಹಾಬಲ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಮರವಂತೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯ ಪರಿಚಯವಿದೆ. ಸಾಕ್ಷಿಗೆ ನಿಪಿ-9ರ ಸ್ವತ್ತು ಸ್ವಾಧೀನತಾ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಆರೋಪಿಯನ್ನು ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಬಂಧಿಸಿದ್ದು ಆತನ ಮೊಬೈಲನ್ನು ಗಂಗೊಳ್ಳಿ ಠಾಣೆಯಲ್ಲಿ ವಶಕ್ಕೆ ಪಡೆಯುವ ವೇಳೆಗೆ ನಾನು ಹಾಜರು ಇದ್ದು ರಾತ್ರಿ 8-30 ರಿಂದ 9 ಗಂಟೆಯವರೆಗೆ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಅದು ಸ್ಯಾಂಸಂಗ್ ಮೊಬೈಲ್ ಇರಬಹುದು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಸ್ಯಾಂಸಂಗ್ ಮೊಬೈಲನ್ನು ನೋಡಿ ಅದು ಅಲ್ಲ ಎಂದು ನುಡಿಯುತ್ತಾರೆ. ಆದರೆ ಮೊಹರಿನ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ಪೊಲೀಸರು ಸದ್ರಿ ದಿನ ಮೇಲೆ ತೋರಿಸಿದ ಮೊಬೈಲನ್ನು ವಶಕ್ಕೆ ಪಡೆದ್ದಿರೂ ಸಹ ಸಾಕಷ್ಟು ವರ್ಷಗಳಾದ ಕಾರಣ ನನಗೆ ನೆನಪಿಲ್ಲ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ:**

ನಾನು ಮತ್ತು ಆರೋಪಿ ಅಕ್ಕ ತಂಗಿಯರ ಗಂಡಂದಿರು. ಆರೋಪಿ ಮತ್ತು ಆತನ ಹೆಂಡತಿಯೊಂದಿಗೆ ಅನೋನ್ಯತೆ ಇಲ್ಲ. ನಮ್ಮೊಂದಿಗೆ ಆತನ ಹೆಂಡತಿ ಅನೋನ್ಯವಾಗಿದ್ದಾರೆ. ಆ ವೇಳೆಯಲ್ಲಿ ಹಾಜರಾಗುವಂತೆ ನೊಟೀಸು ನೀಡಿರಲಿಲ್ಲ ಆದರೆ ಬರುವಂತೆ ಸೂಚಿಸಿರುತ್ತಾರೆ. ಸುಮಾರು ವರ್ಷಗಳಿಂದ ನನ್ನ ಮತ್ತು ಆರೋಪಿಯ ನಡುವೆ ಮಾತುಕತೆ ಇಲ್ಲ. ಈ ಪಿರ್ಯಾದನ್ನು ಯಾರು ನೀಡಿದ್ದು ಎಂದು ನನಗೆ ತಿಳಿದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಮಾತುಕತೆ ಇಲ್ಲದ ಕಾರಣ ನನ್ನನ್ನು ಸಾಕ್ಷಿದಾರರನ್ನಾಗಿ ಕರೆಯಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಆಗ ಮಾತನಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಆ ದಿನ ಎಷ್ಟು ಸಹಿ ಪಡೆದಿರುತ್ತಾರೆ ಎಂದು ನೆನಪಿಲ್ಲ. ನನ್ನ ಎದುರುಗಡೆ ಮೊಬೈಲು ಪೋನನಲ್ಲಿ ಯಾವೆಲ್ಲಾ ವಿಚಾರಗಳು ಅಡಗಿದೆ ಎಂದು ವೀಕ್ಷಿಸಿಲ್ಲ. ಆದ್ದರಿಂದ ಮೊಬೈಲ್ ಪೋನ್ ನಲ್ಲಿ ಏನು ಇದೆ ಎಂದು ನನಗೆ ತಿಳಿದಿಲ್ಲ. ಅದನ್ನು ನಾನು ಸೂಕ್ಷ್ಮವಾಗಿ ಪರಿಶೀಲಿಸಿಲ್ಲ.

ನಾನು ನೋಡಿದಾಗ ಟೇಬಲ್ ಮೇಲೆ ಮೊಬೈಲು ಪೋನು ಇತ್ತು. ಅದನ್ನು ಅಲ್ಲಿ ಯಾವಾಗ ಇರಿಸಲಾಗಿತ್ತು ಎಂದು ನಾನು ನೋಡಿಲ್ಲ. ಅದು ಆರೋಪಿಯ ಮೊಬೈಲು ಎಂದು ತಿಳಿದಿತ್ತು. ಅದರ ಹೆಸರನ್ನು ನಿಖರವಾಗಿ ಹೇಳಲಾಗುವುದಿಲ್ಲ. ಅದು ಹೆಣ್ಣು ಮಕ್ಕಳ ಕೇಸು ಆಗಿರುತ್ತದೆ. ಆ ಬಗ್ಗೆ ಪೊಲೀಸರು ಠಾಣೆಯಲ್ಲಿ ಹೇಳಿರುತ್ತಾರೆ. ಸಂಬಂಧಪಟ್ಟ ಹೆಣ್ಣುಮಕ್ಕಳು ಯಾರೆಂದು ನನಗೆ ಈವರೆಗೂ ತಿಳಿದಿಲ್ಲ.

ಪಂಚನಾಮೆ ಎಷ್ಟು ಪುಟಗಳಿವೆ ಎಂದು ಹೇಳಲಾಗುವುದಿಲ್ಲ. ಅದರಲ್ಲಿ ಮೊಬೈಲು ಪೋನನ್ನು ಹೇಗೆ ವರ್ಣಿಲಾಗಿದೆ ಎಂದು ನನಗೆ ತಿಳಿದಿಲ್ಲ. ಮೊಬೈಲು ಪೋನು ನಂಬರ್ ನೆನಪಿಲ್ಲ. ಪೊಲೀಸರು ಸೂಚಿಸಿದಂತೆ ದಾಖಲೆಗೆ ಸಹಿ ಮಾಡಿದ್ದು ಅದರಲ್ಲಿ ಬರೆದಿರುವ ವಿಚಾರಗಳ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**